

## ಕಾಣದಾದ ಧಾನ್ಯದಾಸ್ತಾನಿನ ಹಗೇವು

ರೈತರ ಜೀವನಾಡಿಯಾಗಿದ್ದ ಹಗೇವು ಇಂದು ಕಣ್ಮರೆಯಾಗಿವೆ. ಹಿಂದಿನ ಕಾಲದಲ್ಲಿ ಧಾನ್ಯ ರಕ್ಷಣೆಗೆ ಬಳಕೆಯಾಗುತ್ತಿದ್ದ ಈ ಕೋಲ್ಡ್ ಸ್ಟೋರೇಜ್ (ಹಗೇವು) ರೈತರ ಆಧುನಿಕ ಜೀವನ ಶೈಲಿಯಿಂದಾಗಿ ಮರೆಯಾಗಿವೆ.

ಧಾನ್ಯಗಳು ದೀರ್ಘಕಾಲದವರೆಗೆ ನಾಶವಾಗದಂತೆ ಕಾಪಿಡಲು ಹಾಗೂ ನುಸಿಪೀಡೆಯಿಂದ ಸಂರಕ್ಷಿಸಲು ಖರ್ಚಿಲ್ಲದೆ ಸುಲಭವಾಗಿ ಈ ಹಗೇವುಗಳನ್ನು ಬಳಸಬಹುದಾಗಿತ್ತು. ಹಿಂದೆಲ್ಲಾ ಇವು ರೈತರಿಗೆ ವರದಾನವಾಗಿದ್ದವು. ಮನೆಯಲ್ಲಿ ಆಹಾರಧಾನ್ಯಗಳು ತೀರಿಹೋದರೆ ಅಥವಾ ಗ್ರಾಮದಲ್ಲಿ ಬರಗಾಲ ಬಂದಾಗ ಈ ಹಗೇವುಗಳಲ್ಲಿನ ಕಾಳುಗಳನ್ನು ಹೊರತೆಗೆದು ಉಪಯೋಗಿಸಲಾಗುತ್ತಿತ್ತು. ಆದರೀಗ ಅಂತಹ ಹಗೇವುಗಳು ನೋಡಲೂ ಸಿಗುವುದೇ ಕಷ್ಟವಾಗಿದೆ.

**–ಮಹಾಂತೇಶ ಬಾಗೇವಾಡಿ, ಬಾಗಲಕೋಟೆ**

## ಸಕ್ಕರೆ ನಿದ್ದೆಯಲ್ಲಿದ್ದ ಹಾವಿನಮರಿ



ಮುಂಜಾನೆಯ ತಂಬೆಲರಲ್ಲಿ ಮುಂಬಾಗಿಲು ತೆರೆಯಲು ಮುಂದಾದಾಗ ಮೂಲೆಯಲ್ಲಿ ಸುರುಳಿ ಸುತ್ತಿದ ಆಕೃತಿಯೊಂದನ್ನು ಕಂಡು ದಂಗಾದೆ. ಸುರುಳಿ ಸುತ್ತಿಕೊಂಡು ತಲೆಯನ್ನು ಒಳಗಿಟ್ಟುಕೊಂಡು ಮಲಗಿದ್ದ ಈ 'ಮರಿಹಾವು' ಆಗ ಸಕ್ಕರೆ ನಿದ್ದೆಯಲ್ಲಿತ್ತು. ನನಗಲ್ಲದೆ, ಮನೆಯವರಿಗೂ ತನ್ನ ದರ್ಶನ ನೀಡಿ ಹಾರಾಡುವಂತೆ ಮಾಡಿತ್ತು.

ಸುಖನಿದ್ರೆಯಲ್ಲಿದ್ದ ಅದನ್ನು ಚಿರನಿದ್ರೆಗೆ ಜಾರಿಸಲು ಸಹಜೀವಿಗಳು ಸಕಲ ಏರ್ಪಾಡುಗಳನ್ನೂ ಯುದ್ಧೋಪಾದಿಯಲ್ಲಿ ಮಾಡಿದರು. ಆದರೆ ಇನ್ನೂ ಲೋಕದ ಅರಿವಿರದ ಈ ಬಾಲ ಜೀವಿಯನ್ನು ಕೊಲ್ಲಲು ಮುಂದಾದವರ ಕಂಡು ಮನಸ್ಸು ಕದಡಿತು. ಕಸ ತುಂಬುವ ಮೊರದಲ್ಲಿ ಇದನ್ನೊಯ್ದು ದೂರಬಿಡುವ ನನ್ನ ಪ್ರಯತ್ನಕ್ಕೆ ಕೊಲ್ಲಲು ಸಿದ್ಧರಾದವರು ಅಡ್ಡಿಯಾದರೂ ಅವರ ಮನವೊಲಿಸಿ ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಿದೆ.

ಅಂದಹಾಗೆ ಮೈಮೇಲೆ ಬಳೆಗಳಂತಹ ರಚನೆಯುಳ್ಳ ಈ ಹಾವು ಬಳೆವಡಕ **(oligodon)** ಎಂದು ಕರೆಯಲಾಗುವ ಸರಿಸೃಪ. ಇದು ಮನುಷ್ಯನ ಜೀವಕ್ಕೆ ಅಪಾಯಕಾರಿಯಾಗುವಷ್ಟು ವಿಷಕಾರಿಯಲ್ಲ. ಪಕ್ಷಿಗಳ ಮೊಟ್ಟೆಗಳು ಇವುಗಳ ಪ್ರಧಾನ ಆಹಾರ. ವಿಷಕಾರಿಯೋ ಅವಿಷಕಾರಿಯೋ ಒಟ್ಟಿನಲ್ಲಿ ಕಂಡಲ್ಲಿ ಕೊಲ್ಲೆಂಬ ಹಣೆಪಟ್ಟಿ ಹೊಂದಿರುವ ಈ ಶಾಪಗ್ರಸ್ತ ಜೀವಿಗಳನ್ನು ಕಂಡಾಗ, ವಿಷ ಇರುವುದು ಅವುಗಳ ಹಲ್ಲಿನಲ್ಲೋ, ಇಲ್ಲಾ ಮನುಜರ ಮನಸ್ಸಿನಲ್ಲೋ ಎಂದು ಗೊಂದಲವುಂಟಾಗುತ್ತದೆ.

**–ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ**



## ಸಂತೆಯಲ್ಲೂ ಮಕ್ಕಳ ಕಲಿಕಾ ವ್ಯಾಪಾರ

ಹೂಕೋಸು, ಎಲೆಕೋಸು, ಬೀನ್ಸ್, ಬೀಟ್ರೂಟ್, ಕ್ಯಾರೆಟ್, ನಿಂಬು, ಕೊತ್ತಂಬರಿ, ಮೆಣಸಿನಕಾಯಿ... ಇವುಗಳ ಬೆಲೆ ಎಷ್ಟು? ಸ್ವಲ್ಪ ರೇಟು ಕಮ್ಮಿ ಮಾಡಿಕೊಳ್ಳಿ ಅನ್ನುವ ಮಕ್ಕಳ ವರಾತ ಕಿವಿಗೆ ಸೊಗಸಾಗಿ ಕೇಳುತ್ತಿತ್ತು. ದೊಡ್ಡವರು ಇರಬೇಕಿದ್ದ ವಾರದ ಸಂತೆಯಲ್ಲಿ ಮಕ್ಕಳದ್ದೇನು ಕೆಲಸ ಅನ್ನುವ ಪ್ರಶ್ನೆಗೆ ಉತ್ತರ ಹುಡುಕ ಹೊರಟಾಗ ತಿಳಿದದ್ದು, 'ಇದು ಪ್ರಾಥಮಿಕ ಶಾಲೆಯೊಂದರ ವಿದ್ಯಾರ್ಥಿಗಳ ಸಂತೆ ಕಲಿಕಾ ಕಾರ್ಯಕ್ರಮ' ಅಂತ.

ಹೊಸನಗರದ ವಿದ್ಯಾಭಾರತಿ ಶಿಕ್ಷಣ ಸಂಸ್ಥೆಯ ಶ್ರೀ ಗುರೂಜಿ ಇಂಟರ್‌ನ್ಯಾಷನಲ್ ರೆಸಿಡೆನ್ಸಿಯಲ್ ಶಾಲೆಯ ವತಿಯಿಂದ ಮಕ್ಕಳಿಗಾಗಿ ಈ ಕಾರ್ಯಕ್ರಮ ಆಯೋಜಿಸಲಾಗಿತ್ತು. ಇಲ್ಲಿನ ಶನಿವಾರ ಸಂತೆಯಲ್ಲಿ ಮಕ್ಕಳ ವ್ಯಾಪಾರ ಕಲರವ ಕಣ್ಮನ ಸೆಳೆಯಿತು. ಸಂತೆಯ ವಾತಾವರಣ, ವ್ಯಾಪಾರದ ಗುಣಲಕ್ಷಣದ ಬಗ್ಗೆ ವಿದ್ಯಾರ್ಥಿಗಳಿಗೆ ಪರಿಚಯಿಸಿಕೊಡುವ ಸಲುವಾಗಿ ಈ ಕಾರ್ಯಕ್ರಮ ಆಯೋಜಿಸಲಾಗಿತ್ತು. ಇದರಲ್ಲಿ ಶಾಲೆಯ ಸುಮಾರು 25ಕ್ಕೂ ಅಧಿಕ ವಿದ್ಯಾರ್ಥಿಗಳು ಭಾಗಿಯಾಗಿದ್ದರು. ಕೆಲವರು ವ್ಯಾಪಾರಿಗಳಾದರೆ ಇನ್ನೂ ಕೆಲವರು ಖರೀದಿದಾರರಾಗಿದ್ದರು. ಇದರಿಂದ ವಿದ್ಯಾರ್ಥಿಗಳಿಗೆ ನಾಲ್ಕು ಗೋಡೆಯ ನಡುವಿನ ತರಗತಿಯ ಬದಲಿಗೆ ಗಳಿಕೆಯೊಂದಿಗೆ ಕಲಿಕೆ, ಗ್ರಹಿಕೆಗೂ ನೆರವಾಯಿತು.

ಸಂತೆಯಲ್ಲಿ ಭಾಗಿಯಾಗಿದ್ದ ಮಕ್ಕಳ ಚಲನವಲನ, ಚೌಕಾಸಿ, ಚಿಲ್ಲರೆ ನೀಡುವಿಕೆ, ಲೆಕ್ಕ, ತೂಕದ ಬಗ್ಗೆ ನಿಗಾವಹಿಸಲೆಂದು ಅವರಿಗೆ ಗೊತ್ತಾಗದ ಹಾಗೆ ಕೆಲವರನ್ನು ನೇಮಿಸಲಾಗಿತ್ತು. ಚಿಕ್ಕ ವಯಸ್ಸಿನ ಮಕ್ಕಳಿಗೆ ವ್ಯವಹಾರದ ಅನುಭವ ಸಿಗಲಿ ಎಂಬುದು ಶಾಲೆಯ ಉದ್ದೇಶ. ಶಾಲೆಯಲ್ಲಿ ಹಲಸಿನ ಮೇಳ ಸೇರಿದಂತೆ ಗದ್ದೆಗೆ ಮಕ್ಕಳನ್ನು ಕರೆದುಕೊಂಡು ಹೋಗಿ ಅವರಿಂದಲೇ ಭತ್ತ ನಾಟಿ ಮಾಡಿಸುವಂತಹ ಕಾರ್ಯವನ್ನೂ ಮಾಡಲಾಯಿತು.

**–ನಗರ ಗುರುದೇವ್ ಭಂಡಾರ್ಕರ್, ಹೊಸನಗರ**

